## ಅರಸೀಕೆರೆ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ರವರ ನ್ಯಾಯಾಲಯದಲ್ಲಿ

**ಸಿ.ಸಿ. ನಂಃ 260/2020**

| | | | |
|---|---|---|---|
| ಸಾಕ್ಷಿದಾರರ ಹೆಸರು | ಗೀತ | ಸಿ.ಡಬ್ಲ್ಯೂ- | 1 |
| ತಂದೆ/ಗಂಡನ ಹೆಸರು | ಬೀರೇಗೌಡ | ಪಿ.ಡಬ್ಲ್ಯೂ | 1 |
| ವಯಸ್ಸು | 43 ವರ್ಷ | ಪ್ರಮಾಣ ವಚನ ಭೋಧಿಸಿದ ದಿನಾಂಕ | |
| ವೃತ್ತಿ | ಗೃಹಿಣಿ | | |
| ವಾಸ | ಅಂಚೆ ಕೊಪ್ಪಲು, ಅರಸೀಕೆರೆ | 06.02.2025 | |

ಮುಖ್ಯ ವಿಚಾರಣೆ ಸಸಅ ರವರಿಂದಃ-

ನನಗೆ ಆರೋಪಿತರು ಗೊತ್ತು. ದಿಃ**18-02-2020** ರಂದು ನಾವು ಆರೋಪಿತರ ಮನೆಗೆ **3,50,000/-** ರೂ.ಗಳಿಗೆ ಭೋಗ್ಯಕ್ಕೆ ಮಾತುಕತೆಯಾಗಿದ್ದು ಆ ದಿನ ಅವರಿಗೆ **3** ಲಕ್ಷ ಕೊಟ್ಟು ಅವರ ಮನೆಗೆ ವಾಸಿಸಲು ಹೋಗಿದ್ದು ಇನ್ನು **50** ಸಾವಿರ ರೂ.ಗಳನ್ನು **3** ತಿಂಗಳ ಬಳಿಕ ಕೊಡುವುದಾಗಿ ಹೇಳಿದೆವು. ಒಂದು ತಿಂಗಳ ಕಾಲ ನಾವು ಆರೋಪಿತರು ಚೆನ್ನಾಗಿದ್ದೆವು. ಅದಾದ ನಂತರ **1** ನೇ ಆರೋಪಿ ಆಗಾಗ ನನ್ನ ಗಂಡ ಮತ್ತು ಮಕ್ಕಳು ಮನೆಯಲ್ಲಿ ಇಲ್ಲದಿದ್ದಾಗ ನಮ್ಮ ಮನೆಗೆ ಬರುವುದು ನನ್ನ ಜೊತೆ ಅಸಭ್ಯವಾಗಿ ವರ್ತಿಸುವುದು, ತಾನು ಹೇಳಿದ ಹಾಗೆ ಕೇಳಬೇಕು ಇಲ್ಲದಿದ್ದರೆ ಮನೆ ಖಾಲಿ ಮಾಡಬೇಕು ಎಂದು ಬೆದರಿಸುತ್ತಿದ್ದರು. ಉಳಿದ **50** ಸಾವಿರ ಹಣ ಕೇಳುವ ನೆಪದಲ್ಲಿ ನಮ್ಮ ಮನೆಗೆ ಬರುತ್ತಿದ್ದ. ನಾನು ಅವರಿಗೆ ಬುದ್ದಿ ಹೇಳಿದರೂ ಕೇಳಲಿಲ್ಲ. ಆ ಕಾರಣದಿಂದ ಮನೆ ಖಾಲಿ ಮಾಡಿ ಹೋಗುವುದಾಗಿ ಹೇಳಿದೆವು. ಬೇವರ್ಸಿ ಮುಂಡೆ, ನಾಯಿ ಮುಂಡೆ ಎಂದು ಕೆಟ್ಟದಾಗಿ **1** ನೇ ಆರೋಪಿ ನನಗೆ ಬೈಯುತ್ತಿದ್ದರು. ನಂತರ ದಿಃ**29-05-2020** ರಂದು ಆರೋಪಿತರು ನಾನು ಕೊಟ್ಟ **3,00,000** ರೂ.ಗಳ ಪೈಕಿ **2,90,000** ರೂ.ಗಳನ್ನು ನನ್ನ ತಂದೆಗೆ ಕೊಟ್ಟಿದ್ದು ಮನೆ ಖಾಲಿ ಮಾಡಿ ಬೀಗ ಕೊಡುವ ಸಮಯದಲ್ಲಿ ಉಳಿದ **10** ಸಾವಿರ ರೂ. ಕೊಡುವುದಾಗಿ ಹೇಳಿದರು.

ಅದೇ ದಿನ ರಾತ್ರಿ **9-30** ಗಂಟೆಗೆ ಮನೆ ಖಾಲಿ ಮಾಡಿ ನಾನು, ನನ್ನ ಗಂಡ ಮತ್ತು ಮಗಳು ಮನೆಯ ಬೀಗ ಕೊಡಲು ಹೋದಾಗ ಎಲ್ಲಾ ಆರೋಪಿತರು ಗಲಾಟೆ ಮಾಡಿ ಏನು **10** ಸಾವಿರ ಹಣ ಕೊಡಬೇಕು, ಬಣ್ಣ, ಮನೆ ಹಾಳು ಮಾಡಿದ್ದೀರಾ ಎಂದು ಹೇಳಿ **1** ನೇ ಆರೋಪಿ ನನ್ನ ಎದೆ ಹಿಡಿದು ಸೀರೆ ಹಿಡಿದು ಎಳೆದಾಡಿದರು. **2** ನೇ ಆರೋಪಿ ನನ್ನ ಜುಟ್ಟು ಹಿಡಿದು ಎಳೆದಾಡಿದರು. **3** ಮತ್ತು **4** ನೇ ಆರೋಪಿತರು ಅವರ ಜೊತೆ ಹಿಡಿದು ಎಳೆದಾಡಿ ಹೊಡೆದರು. ಅವಾಚ್ಯ ಶಬ್ದಗಳಿಂದ ಬೈದರು. ಆಗ ಚಾಸಾ-**2** ರಿಂದ

4 ರವರು ಬಂದು ಜಗಳ ಬಿಡಿಸಿದರು. ನಾವು ಮನೆಯ ಬೀಗ ಕೊಟ್ಟು ವಾಪಸ್ಸು ಬಂದೆವು. ಅಲ್ಲಿದ್ದ ಹಿರಿಯರಿಗೆ ಆ ವಿಷಯವನ್ನು ತಿಳಿಸಿದೆವು. ಅವರು ನಾವು ಆರೋಪಿತರ ಜೊತೆ ಮಾತನಾಡಿ 10 ಸಾವಿರ ರೂ. ಕೊಡಿಸುವುದಾಗಿ ಹೇಳಿದರು. ಅದಕ್ಕೆ ಆರೋಪಿತರು ಒಪ್ಪದೇ ಇದ್ದಾಗ ದಿ: **30-05-2020** ರಂದು ಸಂಜೆ **6-00** ಗಂಟೆಗೆ ಪೋಲೀಸ್ ಠಾಣೆಗೆ ಹೋಗಿ ದೂರು ಸಲ್ಲಿಸಿರುತ್ತೇನೆ. ನಾನು ಕೊಟ್ಟ ಪೋಲೀಸ್ ದೂರನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ದೂರನ್ನು ನಿಪಿ-**1** ಎಂದು, ಸಾಕ್ಷಿಯ ಸಹಿಯನ್ನು ನಿಪಿ-**1**(ಎ) ಎಂದು ಗುರ್ತಿಸಲಾಯಿತು.

ಮಾರನೇ ದಿನ ಬೆಳಗ್ಗೆ 10-00 ಗಂಟೆಗೆ ಪೋಲೀಸರು ಅಲ್ಲಿಗೆ ಬಂದು ಮಹಜರ್ ಮಾಡಿ ಫೋಟೋ ತೆಗೆದಿರುತ್ತಾರೆ. ಸದರಿ ಮಹಜರ್ ನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರ್ತಿಸಲಾಯಿತು. 2 ಫೋಟೋಗಳನ್ನು ನಿಪಿ-3 ಮತ್ತು 4 ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಈಶಣ್ಣ, ಮಂಜಣ್ಣ ಎನ್ನುವವರು ಇದ್ದರು. ಸ್ಥಳದಲ್ಲಿ ಕಚ್ಚಾ ನಕ್ಷೆಯನ್ನು ತಯಾರು ಮಾಡಿರುತ್ತಾರೆ.

ದಿ: 10-09-2020 ರಂದು ಪೋಲೀಸರು ಠಾಣೆಗೆ ಕರೆಯಿಸಿ ವಿ.ಸಿ. ಮೂಲಕ ಮ್ಯಾಜಿಸ್ಟ್ರೇಟ್ ರವರ ಮುಂದೆ ಹೇಳಿಕೆ ನೀಡಿರುತ್ತೇನೆ. ಕವರ್ ನಲ್ಲಿದ್ದ ಹೇಳಿಕೆಯನ್ನು ತೆಗೆದಿದ್ದು, ಸದರಿ ಹೇಳಿಕೆಯನ್ನು ನಿಪಿ-5 ಎಂದು, ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ನಾನು ನ್ಯಾಯಾಧೀಶರ ಮುಂದೆ ನೀಡಿದ ಹೇಳಿಕೆಯಲ್ಲಿ 10 ಸಾವಿರ ದ ಬದಲು 8 ಸಾವಿರ ಎಂದು ಹೇಳಿದ್ದು ಆ ಬಗ್ಗೆ ನಾನು ಪೋಲೀಸರಿಗೆ 10 ಸಾವಿರ ಎಂದು ಪುರಾವಣಿ ಹೇಳಿಕೆಯನ್ನು ನೀಡಿರುತ್ತೇನೆ. ಸದರಿ ಹೇಳಿಕೆಯನ್ನು ನಿಪಿ-6 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು: ಶ್ರೀ ಎಸ್.ಪಿ. ವಕೀಲರಿಂದ:-</u>

ಕಾಲಾವಕಾಶ ಕೋರಿದ್ದು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿದಾರರ ಸಾಕ್ಷ್ಯವನ್ನು ಗಣಕೀಕೃತ ಮಾಡಿಕೊಳ್ಳಲಾಯಿತೆಂದು ಈ ಮೂಲಕ ದೃಢೀಕರಿಸಿರುತ್ತೇನೆ.

(ಸಾ ಓ ಹೇ ಕೇ ಸ ಇ ಎಂದು ಒಪ್ಪಿರುತ್ತಾರೆ)

**(** ಕಿರಣ್ ಕುಮಾರ್ ಡಿ. ವಡಿಗೇರಿ **)**
ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.
ಅರಸೀಕೆರೆ.ದಿ: **06-02-2025.**